ಶ್ರೀ ಕೆ. ಎಚ್. ಶ್ರೀನಿವಾಸ್.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಬರೀ ಚುನಾವಣೆಗಳನ್ನು ಮಾಡಲಿಕ್ಕೆ ಹೋಗಿದ್ದಾರೆ. ಕೆಲವು ಪುರಸಭೆಗಳಿಗೆ ಚುನಾವಣೆಗಳು ಈಗತ್ತಾನೇ ಮುಗಿದಿದೆ. ಇವೊತ್ತು ಮುಗಿದಂಥ ಪುರಸಭೆಗಳಿಗೂ ಕೂಡ ಡಿಸೆಂಬರ್ ೩೧ರ ವರೆಗೆ ಜೀವಂತವಿರಲು ತೀರ್ಮಾನ ತೆಗೆದುಕೊಳ್ಳುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಂ. ಚಂದ್ರಶೇಖರ್.—ಈಗ ನಾಲ್ಕು ತಿಂಗಳು ರದ್ದು ಮಾಡಿ ಆಡ್ಮಿನಿಸ್ಟ್ರೇಟರನ್ನು ಹಾಕಬೇಕು ಎನ್ನುವ ತೀರ್ಮಾನ ತೆಗೆದುಕೊಂಡು ಸದ್ಯಕ್ಕೆ ೩೧ ಡಿಸೆಂಬರ್‌ವರೆಗೆ ಮುಂದುವರಿಸಿದ್ದೇವೆ.

ಚೋಳನಾಯಕನ ಹಳ್ಳಿಗೆ ಕುಡಿಯುವ ನೀರಿನ ಸರಬರಾಜು

೪೪೪ (೮೧) ಶ್ರೀ ಎಂ. ಎಸ್. ಕೃಷ್ಣನ್ (ರಾಜಾಜಿ ನಗರ).—ಮಾನ್ಯ ಗ್ರಾಮಾಣಾಭಿವೃದ್ಧಿ ಪಂಚಾಯತ್ ರಾಜ್ ಹಾಗೂ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ:—

(ಅ) ಬೆಂಗಳೂರು ನಗರ ಜಿಲ್ಲೆಯ ಉತ್ತರ ತಾಲ್ಲೂಕಿನ ಚೋಳನಾಯ್ಕನ ಹಳ್ಳಿಗೆ ಹೊಸ ಕೊಳವಿಯ ನೀರು ಸರಬರಾಜು ಯೋಜನೆಯಡಿಯಲ್ಲಿ ಕುಡಿಯುವ ನೀರು ಪೂರೈಸಲು ಸರ್ಕಾರದಿಂದ ಮಂಜೂರಾತಿ ಆಗಿದೆಯೆ ?

(ಆ) ಹಾಗಿದ್ದಲ್ಲಿ ಮಂಜೂರು ಮಾಡಲಾಗಿರುವ ಅಂದಾಜು ವೆಚ್ಚವೆಷ್ಟು ?

(ಇ) ಈ ಅಂದಾಜನಲ್ಲಿ ಇದುವರೆಗೂ ವೆಚ್ಚ ಮಾಡಲಾಗಿರುವ ಒಟ್ಟು ಮೊತ್ತವೆಷ್ಟು (ವರ್ಷವಾರು ಖರ್ಚಿನ ವಿವರಗಳನ್ನು ಸಂಪೂರ್ಣ ನೀಡುವುದು)

(ಈ) ಈ ಯೋಜನೆಯನ್ನು ಇಲ್ಲಿಯತನಕ ಪೂರ್ಣಗೊಳಿಸದಿರಲು ಕಾರಣಗಳೇನು ? ಈ ವಿಳಂಬಕ್ಕೆ ಕಾರಣ ಕರ್ತರು ಯಾರು ?

(ಉ) ಎಷ್ಟು ದಿನಗಳೊಳಗೆ ಊರಿನಾದ್ಯಂತ ಕೊಳವಿಗಳ ಮೂಲಕ ನೀರನ್ನು ಒದಗಿಸಲಾಗುವುದು ?

ಶ್ರೀ ಶಬ್ಬುಲ್ ನಜೀರ್‌ಸಾಬ್ (ಗ್ರಾಮಾಣಾಭಿವೃದ್ಧಿ ಪಂಚಾಯತ್‌ರಾಜ್ ಹಾಗೂ ವಕ್ಫ್ ಮಂತ್ರಿಗಳು).—

(ಅ) ಆಗಿದೆ.

(ಆ) ೨.೭೬ ಲಕ್ಷ ರೂ.

(ಇ)

ವರ್ಷ	ರೂ.
೧೯೮೬–೮೭	೫೪,೦೨೯–೨೩
೧೯೮೭–೮೮	— —
ಒಟ್ಟು	೫೪,೦೨೯–೨೩

(ಈ) ಟ್ಯಾಂಕ್ ಕೆಲಸಕ್ಕಾಗಿ ಪಾಯವನ್ನು ಆಗೆದಾಗ ಬಂಡೆ ಸಿಕ್ಕಿರುವುದರಿಂದ ಕೆಲಸ ವಿಳಂಬವಾಗಿದೆ.

(ಉ) ಮಾರ್ಚ್ ೧೯೮೮ರ ಒಳಗೆ ಪೂರ್ಣಗೊಳಿಸಲಾಗುವುದು.

ಮಾನ್ಯ ಅಧ್ಯಕ್ಷರೇ, ತಪ್ಪು ಮುಖಾಂತರ ಮಾನ್ಯ ಸದಸ್ಯರಲ್ಲಿ ಕ್ಷಮಾಪಣೆ ಕೇಳಿಕೊಳ್ಳುತ್ತೇನೆ. ಟ್ಯಾಂಕ್ ಪಾಯ ತೆಗೆಸುವಲ್ಲಿ ಬಂಡೆ ಸಿಕ್ಕಿದೆ ಎಂದು ಅಧಿಕಾರಿಗಳು ನಿರ್ದೇಶನ ತೋರಿಸಿದ್ದಾರೆ. ನಿರ್ದೇಶ ಅಧಿಕಾರಿಗೆ ಜವಾಬ್ದಾರಿಯನ್ನು ವಹಿಸಿ ೧೯೮೮ ಮಾರ್ಚ್‌ನೊಳಗೆ ಈ ಕೆಲಸವನ್ನು ಪೂರ್ತಿಗೊಳಿಸಿ ಕೊಡುತ್ತೇನೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸಚಿವರು ಮಾರ್ಚ್ ೧೯೮೮ರ ಒಳಗೆ ಖಂಡಿತವಾಗಿಯೂ ಟ್ಯಾಂಕ್ ಕೆಲಸವನ್ನು ಮಾಡಿ ಮುಗಿಸಿಕೊಡುತ್ತೇವೆಂದು ಹೇಳಿರುವುದಕ್ಕೆ ಅವರಿಗೆ ವಂದನೆಗಳನ್ನು ಸಲ್ಲಿಸುತ್ತೇನೆ. ನನ್ನ ಮೊದಲನೆಯ ಪ್ರಶ್ನೆ ಮಂಜೂರಾತಿ ಯಾವಾಗ ದೊರೆಯಿತು ಎನ್ನುವುದಕ್ಕೆ ಉತ್ತರಿಸಬೇಕೆಂದು ಕೇಳುತ್ತೇನೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—೧೯೮೬ ರಲ್ಲಿಯೇ ಮಂಜೂರಾತಿ ದೊರಕಿದೆ.

ಶ್ರೀ ಎಂ. ಎಸ್. ಕೃಷ್ಣನ್.—೨೭-೩-೮೬ ರಲ್ಲಿ ಮಂಜೂರಾತಿ ಕೊಟ್ಟಿದ್ದು ೧೯೮೭ರ ವರೆಗೆ ೫೪.೦೫ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಆದರೆ ಬಜೆಟ್ ಎಸ್ಟಿಮೇಟ್‌ನಲ್ಲಿ ಮಂಜೂರಾತಿ ದೊರೆತಿರುವುದು ೧.೨೦ ಲಕ್ಷ ರೂಪಾಯಿಗಳಿಗೆ.

ಶ್ರೀ ಅಬ್ದುಲ್ ನಜೀರ್‌ಸಾಬ್.—ಬಡ್ಜೆಟ್ ಟೋಟಲ್ ಗ್ರ್ಯಾಂಟ್ ೨.೨೬ ಲಕ್ಷ ಖರ್ಚು ಮಾಡಿರ ತಕ್ಕಂಥದ್ದನ್ನು ಮೇಲೆ ಹೇಳಿದ್ದೇನೆ. ಮತ್ತೆ ಈ ಕೆಲಸ ನಿರ್ವಹಿಸುವುದರಲ್ಲಿ ಅಧಿಕಾರಿಗಳು ನಿರ್ಲಕ್ಷತನ ತೋರಿಸಿದ್ದಾರೆ ಆದ್ದರಿಂದ ಅಧಿಕಾರಿಗಳಿಗೆ ಜವಾಬ್ದಾರಿಯನ್ನು ಸಹಿಸಿ ಕೊಟಿರತಕ್ಕಂಥ ಕಾಲದಲ್ಲಿ ಪೂರ್ಣಗೊಳಿಸದೆ ಹೋದರೆ ಅವರ ಮೇಲೆ ಶಿಸ್ತಿನ ಕ್ರಮವನ್ನು ತೆಗೆದುಕೊಳ್ಳುತ್ತೇನೆಂದು ಹೇಳುತ್ತೇನೆ.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ನನ್ನ ೪೫ (೪೧೬) (೫) ಪ್ರಶ್ನೆಗೆ ಉತ್ತರ ನೀಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ಈ ಪ್ರಶ್ನೆಯನ್ನು ತಡೆಹಿಡಿಯುವುದು ಒಳ್ಳೆಯದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಜನತಾ ಪಕ್ಷದವರು ಎಷ್ಟು ಡಿಫೆಂಡ್ ಮಾಡಿದರೂ ಅವರ ಹಣೇಬರಹ ಅಷ್ಟೆ.

ಅಧ್ಯಕ್ಷರು.—ಮಾನ್ಯ ಭೂಪತಿಯವರು ಜನತಾ ಪಕ್ಷದವರಲ್ಲ. ಕಾಂಗ್ರೆಸ್ಸಿನವರು.

ಶ್ರೀ ಜ್ಞಾನದೇವ ಎನ್. ದೊಡ್ಡಮೇಟಿ.—ಜಿಲ್ಲಾ ಪರಿಷತ್ತಿನ ಅಧ್ಯಕ್ಷರ ಪ್ರವಾಸ ಭತ್ಯೆದ ಮೆಚ್ಚಣಿ ಎಷ್ಟು ? ಜಿಲ್ಲಾವಾರು ಮಾಹಿತಿ ಒದಗಿಸಿ ಎಂದು ಕೇಳಿದೆ, ಆದರೆ ಅದಕ್ಕೆ ಉತ್ತರ ನೀಡಿಲ್ಲ.

ಶ್ರೀ ಅಬ್ದುಲ್ ನಜೀರ್ ಸಾಬ್.—ನಾನು ಮೊದಲೇ ಇದನ್ನು ತಡೆಹಿಡಿಯಬೇಕೆಂದು ಕೇಳಿದೆ. ಪ್ರತಿಯೊಂದು ಜಿಲ್ಲಾ ಪರಿಷತ್ತಿಗೂ ೩ ಕಾರುಗಳನ್ನು ಕೊಳ್ಳಲು ಸರ್ಕಾರ ಆಜ್ಞೆ ಮಾಡಿದೆ. ಜಿಲ್ಲಾ ಪರಿಷತ್ತಿಗೆ ಸರ್ಕಾರದಿಂದ ಹಣ ಕೊಡಬೇಕೆಂದು ಆಜ್ಞೆ ಮಾಡಿ ಅದರಂತೆ ಕೊಟ್ಟಿದ್ದೇವೆ. ಅವರು ಬತ್ತೆ ತೆಗೆದುಕೊಳ್ಳತಕ್ಕ ಮಾಹಿತಿ ಇಲ್ಲ. ಅದು ಬಂದಮೇಲೆ ಮಾನ್ಯ ಸದಸ್ಯರಿಗೆ ಕಳುಹಿಸಿಕೊಡುತ್ತೇನೆ.

ಶ್ರೀ ಯು. ಭೂಪತಿ.—ನೀವು ನನ್ನನ್ನು ಕಾಂಗ್ರೆಸ್ಸಿನವರು ಅಂದಿರಿ. ಅದು ರೆಕಾರ್ಡಿಗೆ ಹೋಗಿದೆ. ನಾನು ಕಮ್ಯುನಿಸ್ಟ್‌ನವನು.

ಅಧ್ಯಕ್ಷರು.—ಈಗ ಅದಕ್ಕೆಲ್ಲ ಸಮಯ ಹಾಳು ಮಾಡಬೇಡಿ.

ಶ್ರೀ ಯು. ಭೂಪತಿ.—ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರಿಗೆ ಕಾರುಗಳನ್ನು ಖರೀದಿ ಮಾಡಿದ್ದಿರಲ್ಲ ಸರ್ಕಾರಿ ಲೆಕ್ಕದಲ್ಲಿ ಅದು ಯಾವ ಶೀರ್ಷಿಕೆಯಲ್ಲಿ ಬರುತ್ತದೆ ? ಅದಕ್ಕೆ ಸರಿಯಾಗಿ ಉತ್ತರಿಸಲಿಲ್ಲ. ಜಿಲ್ಲಾ ಪರಿಷತ್ತಿಗೆ ಹಣ ಬಿಡುಗಡೆ ಮಾಡಿದ್ದೆವೆಂದು ಹೇಳಿದಿರಿ. ಅದು ಯಾವ ಶೀರ್ಷಿಕೆಯಲ್ಲಿ ? ಜಿಲ್ಲಾ ಪರಿಷತ್ತಿನ ಅಧ್ಯಕ್ಷರು ಮತ್ತು ಉಪಾಧ್ಯಕ್ಷರು ಪ್ರವಾಸ ಮತ್ತಿತರ ಭತ್ಯೆಗಳನ್ನು ತೆಗೆದುಕೊಂಡಿದ್ದಾರೆ. ಆ ಲೆಕ್ಕ ಸುಲಭವಾಗಿ ಸಿಗುತ್ತದೆ. ಪ್ರತಿ ತಿಂಗಳು ಜಿಲ್ಲಾ ಪರಿಷತ್ತಿನವರು ಕಳುಹಿಸಿಕೊಟ್ಟರೆ ಆಯಿತು. ಮಾಹಿತಿ ಬಂದಿಲ್ಲ ಅನ್ನುತ್ತಾರೆ. ೧೫ ದಿನಗಳ ಹಿಂದೆ ನಾವು ಈ ಪ್ರಶ್ನೆಯನ್ನು ಹಾಕಿದ್ದೇವೆ. ಜಿಲ್ಲಾ ಪರಿಷತ್ತಿನ ಅಧೀನದಲ್ಲಿ ಬರುವ ಸಿಬ್ಬಂದಿ ವರ್ಗಕ್ಕೆ ಎನ್.ಜಿ.ಸಿ. ಅಂಥ ಬರೆದಿದ್ದಾರೆ. ನಾವು ಕೇಳಿರುವುದು ಎಲ್.ಒ.ಸಿ. ಎಂದು ಎಲ್.ಒ.ಸಿ. ತೊಂದರೆಯಿಂದ ಸಂಬಳಸಿಗದಿರುವುದು ನಿಜ. ನೀವು ಇಲ್ಲವೆಂದು ಹೇಳಬೇಡಿ. ಬಳ್ಳಾರಿ ಜಿಲ್ಲಾ ಆರೋಗ್ಯ ಇಲಾಖೆಯ ಸಿಬ್ಬಂದಿಯವರು ಸಂಬಳ ಸಿಗಲಿಲ್ಲವೆಂದು ಮುಷ್ಕರ ಮಾಡಿದರು. ಎನ್.ಆರ್.ಇ.ಪಿ. ಡಿಪಿಎಪಿ.ಯಲ್ಲಿ ಸಂಬಳ ಕೊಡಬೇಕಾದ ದಿನಗೂಲಿ ನೌಕರರಿಗೆ ೩-೪ ತಿಂಗಳಿನಿಂದ ಸಂಬಳ ಸಿಗಲಿಲ್ಲ. ಕಾರಣವಲ್ಲ.ಒ.ಸಿ. ತಡವಾಗಿರುವುದರಿಂದ. ಅಧಿಕಾರಿಗಳು ಬರೆದುಕೊಟ್ಟ ಉತ್ತರ ಹೇಳಿದರೆ ಆಗದು, ದಯವಾಡಿ ಸ್ವಲ್ಪ ಯೋಚಿಸಿ.

ಶ್ರೀ ಅಬ್ದುಲ್ ನಜೀರ್ ಸಾಬ್.— ಈ ಪ್ರಶ್ನೆಯನ್ನು ತಡೆಹಿಡಿಯಲಿಕ್ಕೆ ನನ್ನ ಅಭ್ಯಂತರವೇನೂ ಇಲ್ಲ. ತಡೆಹಿಡಿದರೆ ಎಲ್ಲಾ ಮಾಹಿತಿಯನ್ನು ಒದಗಿಸಬಹುದು. ಎನ್.ಆರ್.ಇ.ಪಿ. ಡಿಪಿಎಪಿ. ಬಗ್ಗೆ ಈಗ ಇಲ್ಲಿ ಹೇಳಿದರೆ ಉತ್ತರಿಸುವುದಕ್ಕಾಗುವುದಿಲ್ಲ. ಅದರಲ್ಲಿ ದಿನಗೂಲಿ ಇಲ್ಲ. ಆರ್ ಎಲ್.ಇ.ಜಿ ನಲ್ಲಿ ದಿನಗೂಲಿ ಇದ್ದಾರೆ. ಕೊಟ್ಟ ಹಣದಲ್ಲಿ ಕಾರು ಕೊಂಡುಕೊಂಡಿದ್ದಾರೆ, ಮತ್ತು ಟಿ.ಎ.ಡಿ.ಎ. ಗೆ ಖರ್ಚಾಗಿದೆ. ಆ ಬಗ್ಗೆ ಉತ್ತರಿಸಿದ್ದೇನೆ. ಕಾರುಗಳಿಗೆ ಯಾವ ಶೀರ್ಷಿಕೆಯಲ್ಲಿ ಖರ್ಚಾಗಿದೆ ಎಂದರೆ ಗ್ರಾಮೀಣ ಅಭಿವೃದ್ಧಿ ಇಲಾಖೆಯಲ್ಲಿರತಕ್ಕ ಶೀರ್ಷಿಕೆ ಅಡಿಯಲ್ಲಿ ಕೊಂಡಿದ್ದಾರೆ. ಸರ್ಕಾರೀ ವೆಚ್ಚದಲ್ಲಿ ಕೊಂಡಿದ್ದಾರೆಂದು ಹೇಳಿದ್ದೇನೆ. ೫೮ ಶೀರ್ಷಿಕೆಗಳು ಇವೆ. ಇಲ್ಲಿ ಅವೆಲ್ಲವನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಯು. ಭೂಪತಿ.— ಈ ರೀತಿ ಉತ್ತರಿಸುವುದು ಸರಿಯಲ್ಲ. ಜಿಲ್ಲಾ ಪರಿಷತ್ತು ಮಂಡಲ ಪಂಚಾಯತಿ ಎಂದರೆ ಮೈ ಮೇಲೆ ದೇವರು ಬಂದ ಹಾಗೆ ಆಡುತ್ತಾರೆ. ದಯವಿಟ್ಟು ಸ್ವಲ್ಪ ತಾಳ್ಮೆಯಿಂದ ಹೇಳಿ.

ಅಧ್ಯಕ್ಷರು.— ನೀವೂ ಸಮಾಧಾನವಾಗಿ ಕೇಳಿ ಅವರೂ ಸಮಾಧಾನದಿಂದ ಉತ್ತರಿಸಲಿ.

ಶ್ರೀ ಯು. ಭೂಪತಿ.—ನಾನು ಸಮಾಧಾನವಾಗಿಯೇ ಕೇಳುತ್ತಿದ್ದೇನೆ. ಜಿಲ್ಲಾ ಪರಿಷತ್ತು ಅಸ್ತಿತ್ವಕ್ಕೆ ಬಂದಮೇಲೆ ಪ್ರವಾಸ ಮಾಡಿತರ ಭತ್ಯಗಳನ್ನು ಎಷ್ಟು ಕ್ಲೈಂ ಮಾಡಿದ್ದಾರೆಂದರೆ ಹೇಳುವುದಕ್ಕಾಗುವುದಿಲ್ಲವೆ ? ಏಕೆ ಮಾಹಿತಿ ಕಳುಹಿಸಲಿಲ್ಲವೆಂದು ಕೇಳಿ. ನಿಮ್ಮ ಆಫಿಷಿಯಲ್ ಮೆಷಿನರಿ ಏನು ಮಾಡುತ್ತಿದೆ ? ನಿಮ್ಮ ಹತ್ತಿರ ದೊಡ್ಡ ಅಧಿಕಾರ ವರ್ಗ ಇರುವಾಗ ಏಕೆ ಮಾಹಿತಿ ತರಿಸಲಿಲ್ಲ ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅವಕ್ಕೊಸ್ಕರ ಪ್ರಶ್ನೆಯನ್ನು ತಡೆಹಿಡಿಯಿರಿ ಎಂದು ಕೇಳಿ. ೨೬ ರಂದು ಪ್ರಶ್ನೆ ಬಂದಿದೆ. ೨೭ ಮತ್ತು ೨೯ ರಂದು ಕೆಲಸದ ದಿನ. ೨ ದಿನ ಬೇರೆ ರಜ ಇತ್ತು. ಟೆಲೆಕ್ಸ್ ಮೆಸೇಜ್ ಕೊಟ್ಟಿದ್ದೇವೆ. ಇನ್ನೂ ಉತ್ತರ ಬಂದಿಲ್ಲ. ಆದರಿಂದ ಪ್ರಶ್ನೆಯನ್ನು ತಡೆಹಿಡಿಯುವುದಾದರೆ ಸಂತೋಷ. ಅದಕ್ಕೆ ನನ್ನದೇನು ಅಭ್ಯಂತರವಿಲ್ಲ. ಮುಂದೆ ಉತ್ತರಿಸುತ್ತೇನೆ.

ಅಧ್ಯಕ್ಷರು.—ಹಾಗಾದರೆ ಭೂಪತಿಯವರ ಪ್ರಶ್ನೆಯನ್ನು ತಡೆಹಿಡಿಯುತ್ತೇನೆ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ, ತಮ್ಮ ಪ್ರಶ್ನೆ ಕೇಳಿ.

ಶ್ರೀ ಬಿ. ಎಸ್. ಯಡಿಯೂರಪ್ಪ.—ನಾನು ನಿಮಿಷದಲ್ಲಿ ಪ್ರಶ್ನೆ ಕೇಳುತ್ತೇನೆ.

ಶ್ರೀ ವೇದಾಂತ ಹೆಬ್ಬಿಗೆ.—ನನ್ನ ಪ್ರಶ್ನೆ ಇದೆ. ನಾನು ಕೇಳಬೇಕಾಗಿತ್ತು.

ಅಧ್ಯಕ್ಷರು.—ಕೌನ್ಸಿಲ್‌ನಲ್ಲಿ ಛೇರ್ಮನ್‌ರವರ ಎಲೆಕ್ಷನ್ ಇದೆ. ಮಂತ್ರಿಗಳು ಅಲ್ಲಿಗೆ ಹೋಗುತ್ತಾರೆ. ಆದ್ದರಿಂದ ಅವರ ಪ್ರಶ್ನೆಯನ್ನು ಮೊದಲು ತೆಗೆದುಕೊಳ್ಳುತ್ತೇನೆ.

ಶ್ರೀ ಜೆ. ಹೆಚ್. ಪಟೇಲ್.—ಅಧ್ಯಕ್ಷರೆ, ಈ ಪ್ರಶ್ನೆಗೆ ಸಂಬಂಧಪಟ್ಟ ಹಾಗೆ ಒಂದು ವಿಷಯ ತಮ್ಮ ಗಮನಕ್ಕೆ ತರುತ್ತೇನೆ. ತಾವು ಇದನ್ನು ತಡೆಹಿಡಿದಿದ್ದೀರಿ. ಇದನ್ನು ಲಿಖಿತ ಮೂಲಕ ಉತ್ತರ ಕೊಡಬಹುದು ಪ್ರಶ್ನೆಯಾಗಿ ಕನ್‌ವರ್ಟ್ ಮಾಡಬಹುದು ಏಕೆಂದರೆ ಇಂಥ ಪ್ರಶ್ನೆಗಳಿಗೆ ಮೂರು ಪೇಜ್ ಉತ್ತರ ಬರೆಯಬೇಕಾಗುತ್ತದೆ.

ಅಧ್ಯಕ್ಷರು.—ಮಾನ್ಯ ಮಂತ್ರಿಗಳು ಹೇಳಿದರು ಎಂದು ತಡೆಹಿಡಿದಿದ್ದೇನೆ.

(ಗೊಂದಲ)

ಶ್ರೀ ಕೆ. ಹೆಚ್. ಪಾಟೀಲ್.—ರೂಲ್ಸ್ ಫಾಲೋ ಮಾಡಲಿ.

ಶ್ರೀ ಜೆ. ಹೆಚ್. ಪಟೇಲ್.—ರೂಲ್ಸೇ ನಾನು ಹೇಳುತ್ತಿರುವುದು.

ಶ್ರೀ ಗೋಪಾಲ ಮಂಕುಂದ ಕಾಣಜೆ.—ನಿಮ್ಮಂಥ ಧೀಮಂತ ಮಂತ್ರಿಗಳು ಈ ರೀತಿ ಹೇಳಬಾರದು. ಇಷ್ಟೊಂದು ಓದಬೇಕು. ಎಂದು ಹೇಳಿದರೆ ಓದಬೇಕು ಅದಕ್ಕೇ ನಿಮ್ಮನ್ನು ಮಂತ್ರಿಯಾಗಿ ಮಾಡಿದ್ದೇವೆ. ಸುಮ್ಮನೆ ಕುಳಿತ್ಕೊಂಡು ನಿದ್ದೆ ಮಾಡುವುದಕ್ಕಲ್ಲ.

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರೇ ತಮ್ಮ ಪ್ರಶ್ನೆ ಕೇಳಿ.

ಶ್ರೀ ಆರ್. ವೆಂಕಟರಾಮಯ್ಯ. ಅಧ್ಯಕ್ಷರೆ, ನನ್ನ ಪ್ರಶ್ನೆ ಇದೆ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೆ, ಕೌನ್ಸಿಲ್‌ನಲ್ಲಿ ಛೇರ್ಮನ್ ಎಲೆಕ್ಷನ್ ಇದೆ. ಮಾನ್ಯ ನಜೀರ್ ಸಾಬ್ ಅವರು ಅಲ್ಲಿ ಹೋಗಬೇಕಾಗಿರುವುದರಿಂದ ಅವರ ಪ್ರಶ್ನೆಗಳನ್ನು ಮೊದಲು ತೆಗೆದುಕೊಳ್ಳುತ್ತೇನೆ.

ಶ್ರೀ ಯು. ಭೂಪತಿ.—ಜೆ. ಹೆಚ್. ಪಟೇಲರು ಇಷ್ಟುದ್ದ ಪ್ರಶ್ನೆಗೆ ಒಂದೇ ಸಾರಿ ಉತ್ತರ ಕೊಡುವುದಕ್ಕೆ ಯಾವರೀತಿಯಾಗುತ್ತದೆ ಎಂದು ಹೇಳಿದರು.....

ಶ್ರೀ ಆರ್. ವೆಂಕಟರಾಮಯ್ಯ.—ಮುಂದಿನ ಪ್ರಶ್ನೆ ನಂಬ್ರೆ ೩೪೯ ನನ್ನದಿದೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಶ್ನೇ ಹಾಕುವ ಬಗ್ಗೆ ನಮಗೆ ಬುದ್ಧಿವಾದ ಹೇಳುವುದಕ್ಕೆ ಬಂದರೆ ಏನು ಮಾಡುವುದು ? ಜೆ. ಹೆಚ್. ಪಟೇಲರು ಬುದ್ಧಿವಾದ ಹೇಳುತ್ತಿದ್ದಾರೆ. ಒಂದೂವರೆ ಪೇಜ್ ಉತ್ತರ ಹೇಗೆ ಹೇಳುವುದಕ್ಕಾಗುತ್ತದೆ ಎಂದರೆ ಏನರ್ಥ ?

ಅಧ್ಯಕ್ಷರು.—ನಾನು ಒಪ್ಪಿಕೊಂಡಿದ್ದೇನೆ. ನಜೀರ್ ಸಾಬ್ ಅವರು ಹೇಳಿದ್ದಕ್ಕೆ ನಾನು ಒಪ್ಪಿಕೊಂಡಿದ್ದೇನೆ.

ಶ್ರೀಮತಿ ನಾಗರತ್ನಮ್ಮ.—ಪ್ರಶ್ನೆ ಹಾಕುವುದಕ್ಕೆ ಇರುವ ಮೂಲ ಹಕ್ಕಿಗೇ ಅಡ್ಡಿ ಮಾಡಿದರೆ ಏನು ಮಾಡಬೇಕು ?

ಶ್ರೀ ಅಬ್ದುಲ್ ನಜೀರ್ ಸಾಬ್.—ಅಧ್ಯಕ್ಷರೆ. ಮಾನ್ಯ ಯಡಿಯೂರಪ್ಪನವರಿಗಿಂತ ಮುಂಚೆ ಮಾನ್ಯ ವೆಂಕಟರಾಮಯ್ಯನವರ ಪ್ರಶ್ನೆ ಇದೆ. ನೀವು ೫ನೇ ಪೇಜ್ ಬಿಟ್ಟು ೬ನೇ ಪೇಜಿನಲ್ಲಿ ಕರೆದಿದ್ದೀರಿ.

ಅಧ್ಯಕ್ಷರು.—ಮಾನ್ಯ ವೆಂಕಟರಾಮಯ್ಯನವರೇ ಕೇಳಿ.

THE NUMBER OF MANDAL PANCHAYATS CONSTITUTED IN THE STATE

47 (41) (C) SRI R. VENKATARAMAIAH (Mulabhagilu).—Will the minister for Rural Development and Panchayat Raj will be pleased to State.—

a) The number of Mandal Panchayats constituted in the State (Districtwise figures may be furnished).

b) If so, the number of Mandal Panchayats are having their own office buildings ?

c) If so, the steps taken by Government to construct the office buildings to Mandal Panchayats ?

d) Wheather basic equipments like furniture and other amenities have been provided to all Mandal Panchayats ?

e) If not, whether the Government will provide funds for the same ?

SRI ABDUL NAZIR SAB (Minister for Rural Development and Panchayat Raj).—

a) 2,469 (Districtwise figures enclosed separtely).

b) The Mandal panchayats Offices are located in the existing Village Panchayat office buildings.

c) Does not arise, in view of reply to (b).